**ಓ.ಎಸ್. ನಂ. 99/2019 ಪಿ.ಡಬ್ಲೂ-1 ಹೆಸರು - ಕೆ ಜಿ ಶಿವಸ್ವಾಮಿ**

**ಸಾಕ್ಷಿಯನ್ನು ದಿನಾಂಕಃ 18.04.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಹೆಚ್ ಸಿ ಎಂ ವಕೀಲರಿಂದಃ-**

ನಮ್ಮ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಛಾಯಾ ಚಿತ್ರವನ್ನು ತೋರಿಸಿದರೆ ನಮ್ಮ ಜಮೀನಿನ ಅಸ್ತಿತ್ವ ದ ಕುರಿತು ನನಗೆ ಗೊತ್ತಾಗುತ್ತದೆ. ನಮ್ಮ ಜಮೀನಿನ ದಕ್ಷಿಣ ದಿಕ್ಕಿನಲ್ಲಿ ನೀರು ಹರಿಯುವ ಹಳ್ಳ ಇದೆ. ಸದರಿ ಹಳ್ಳ ಕಬಿನಿ ಜಲ ಸಂಪನ್ಮೂಲ ಇಲಾಖೆಗೆ ಸೇರಿದ್ದಾಗಿರುತ್ತದೆ. ಸದರಿ ಕಾಲುವೆ ಮಾಡುವ ಕಾಲಕ್ಕೆ ಯಾರಿಗೆ ಸೇರಿದ ಜಮೀನೆಲ್ಲ ಸದರಿ ಕಾಲುವೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು ಎಂದು ಗೊತ್ತಿಲ್ಲ. ದಾವಾ ಸರ್ವೆ ನಂಬರ್ 113 ರ ಜಮೀನು ನಮ್ಮ ಪೂರ್ವಿಕರ ಕಾಲದಿಂದಲೂ 4 ಎಕರೆ 24 ಗುಂಟೆ ಇದೆ. ನಮಗೆ ಸೇರಿದ ದಾವಾ ಸರ್ವೆ ನಂಬರ್ 113 ರ ಜಮೀನು ಸಹ ಕಾಲುವೆಗಾಗಿ ಸ್ವಾಧೀನಗೊಂಡಿದೆ ಎಂದರೆ ಸರಿಯಲ್ಲ. ನಾನು ನಮ್ಮ ಜಮೀನಿನ ದಕ್ಷಿಣಕ್ಕೆ ಇರುವ ನೀರು ಹರಿಯುವ ಹಳ್ಳಕ್ಕೆ ಸಂಬಂಧಿಸಿದಂತೆ ಯಾವುದೇ ಛಾಯಾ ಚಿತ್ರವನ್ನು ಹಾಜರುಪಡಿಸಿಲ್ಲ. ನೀರು ಹರಿಯುವ ಹಳ್ಳ ನಮ್ಮ ಜಮೀನಿನ ವ್ಯಾಪ್ತಿಯಲ್ಲಿ ಇಲ್ಲ, ಬದಲಾಗಿ ನಮ್ಮ ಜಮೀನಿನ ಪಕ್ಕದಲ್ಲಿದೆ. ನಿಪಿ 15 ರ ಛಾಯಾ ಚಿತ್ರದಲ್ಲಿರುವ ನೀರು ಹರಿಯುವ ಚಾನಲ್ ನಮ್ಮ ಜಮೀನಿನ ಪೂರ್ ದಿಕ್ಕಿಗೆ ಇದೆ. ನಮ್ಮ ಜಮೀನಿನ ಪೂರ್ವಕ್ಕೆ ಚಾನಲ್ ಇದ್ದು, ಅದಕ್ಕೆ ಹೊಂದಿಕೊಂಡಂತೆ ಕಮಲಮ್ಮ ಮತ್ತು ಮಹದೇವಪ್ಪರವರ ಜಮೀನು ಇದೆ. ನಿಪಿ 15 ರಂತೆ ನಮ್ಮ ಜಮೀನಿನ ಪೂರ್ವಕ್ಕೆ ಚಾನಲ್ ಇರುವ ಕುರಿತು ವಾದ ಪತ್ರದಲ್ಲಿ ಉಲ್ಲೇಖ ಮಾಡಿಲ್ಲ, ಆ ಕುರಿತು ಉಲ್ಲೇಖ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನತೆಯಲ್ಲಿಲ್ಲದ ಕಾರಣ ದಾವಾ ಸ್ವತ್ತಿನ ಕುರಿತಾದ ಚೆಕ್ಕು ಬಂಧಿಯ ಬಗ್ಗೆ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಇದೆ. ವಾದ ಪತ್ರದಲ್ಲೂ ಸಹ ದಾವಾ ಸ್ವತ್ತಿನ ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಎಂದು ನಮೂದು ಮಾಡಿದ್ದೇನೆ.

2. ನನ್ನ ಜಮೀನಿನ ಪಶ್ಚಿಮಕ್ಕೆ ಕುಮಾರಸ್ವಾಮಿರವರ ಸ್ವತ್ತು ಇದೆ. ನನ್ನ ಜಮೀನಿನ ಪಶ್ಚಿಮಕ್ಕೆ ಕುಮಾರ ಸ್ವಾಮಿರವರಿಗೆ ಸೇರಿದ ಸ್ವತ್ತು ಮಾತ್ರ ಇದ್ದು, ಆ ಬಗ್ಗೆ ನನಗೆ ಮಾಹಿತಿ ಇದೆ. ಕುಮಾರಸ್ವಾಮಿರವರ ಜಮೀನಿನ ಸರ್ವೆ ನಂಬರ್ 112. ನನ್ನ ಜಮೀನಿನ ಪಶ್ಚಿಮಕ್ಕೆ ಶಶಿಕಲಾರವರಿಗೆ ಸೇರಿದ ಸರ್ವೆ ನಂಬರ್ 112/1 ರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 09.10.2015 ರಲ್ಲಿ ನಾನು ನನ್ನ ಜಮೀನಿನ ಹದ್ದು ಬಸ್ತು ಮಾಡಿಸಿದ್ದು, ಆ ಕುರಿತು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಾನು

ನ್ಯಾಯಾಲಯಕ್ಕೆ ಅಳತೆ ಮಾಡಲು ನೀಡಿರುವ ಅರ್ಜಿಯನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**